**ದಿನಾಂಕ:11-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು 5, 8 ಮತ್ತು 9 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್.ಆರ್.ಹೆಚ್. ರವರಿಂದಃ-**

ಈರಪ್ಪ ಕಲ್ಲಪ್ಪ ಸುತಾರ್ ರವರ ನನಗೆ ಕಾಕ ಆಗಬೇಕು . ನನ್ನ ತಂದೆಯ ಹೆಸರು ಭೀಮರಾವ್ ಈರಪ್ಪ ಸುತಾರ್. ನಂತರ ಈರಪ್ಪ ಕಲ್ಲಪ್ಪ ಸುತಾರ್ ರವರು ನಿಮಗೆ ಏನಾಗಬೇಕು ಎಂದರೆ ಸಾಕ್ಷಿ ಅಜ್ಜ ಆಗಬೇಕು ಎನ್ನುತ್ತಾರೆ. ನನ್ನ ಅಜ್ಜನಿಗೆ 4 ಜನ ಮಕ್ಕಳು, ಅವರುಗಳೆಂದರೆ ಕಲ್ಲಪ್ಪ, ಭೀಮರಾವ್, ರಾಮಚಂದ್ರ ಮತ್ತು ಶಂಕರ್. ಕಲ್ಲಪ್ಪ ರವರು ಈಗ ಮರಣ ಹೊಂದಿದ್ದಾರೆ, ಅವರ ಮಕ್ಕಳ ಹೆಸರು ಬಸವರಾಜ ಮತ್ತು ಚಂದ್ರಕಾಂತ. ಚಂದ್ರಕಾಂತ ರವರು ಈಗ ಮರಣ ಹೊಂದಿದ್ದಾರೆ. ಶಂಕರ್ ಮತ್ತು ರಾಮಚಂದ್ರ ರವರು ಜೀವಂತ ಇದ್ದಾರೆ. ನನ್ನ ತಂದೆ ಭೀಮರಾವ್ ಈ ದಾವೆಯನ್ನು ಹೂಡಿದ ನಂತರ ಮರಣ ಹೊಂದಿದ್ದಾರೆ. ನಮ್ಮ ತಾಯಿ ಜೀವಂತ ಇದ್ದಾರೆ. ನನ್ನ ತಂದೆಗೆ ನಾವು 4 ಜನ ಮಕ್ಕಳು, ಅವರುಗಳೆಂದರೆ ಸುರೇಶ್ ಅಂದರೆ ನಾನು, ರಮೇಶ್, ಪುಷ್ಪ ಮತ್ತು ಭಾರತಿ.

**2.** ದಾವಾ ಸ್ವತ್ತುಗಳು ನನ್ನ ಅಜ್ಜನಿಂದ ಬಂದ ಸ್ವತ್ತುಗಳು ಎಂದರೆ ಸರಿ. ನನ್ನ ತಂದೆ ಮತ್ತು ಅವರ ಅಣ್ಣ ತಮ್ಮಂದಿರ ಮಧ್ಯೆ ದಾವಾ ಸ್ವತ್ತುಗಳ ಪಾಲು ವಾಟ್ನಿ ಸಲುವಾಗಿ ನ್ಯಾಯಾಲಯದಿಂದ ಮತ್ತು ನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಾಯಿತ ಪಾಲು ವಿಭಾಗ ಪತ್ರದ ಮೂಲಕ ಪಾಲು ಆಗಿಲ್ಲ ಎಂದರೆ ಸರಿ. ನನ್ನ ಅಜ್ಜನ ಸ್ವತ್ತುಗಳಲ್ಲಿ ನನ್ನ ತಂದೆ ಮತ್ತು ಅವರ ಅಣ್ಣ ತಮ್ಮಂದಿರಿಗೆ 1/4 ಭಾಗ ಇದೆ ಎಂದರೆ ಸರಿ.

**3.** ದಿನಾಂಕ 30.04.1992 ರಲ್ಲಿ ಕುಟುಂಬದ ಸದಸ್ಯರ ಮಧ್ಯೆ ಸ್ವತ್ತುಗಳ ವಿಚಾರವಾಗಿ ಪರಸ್ಪರ ಒಪ್ಪಿಗೆಯ ಹಂಚಿಕೆಯಾಗಿದ್ದವು, ಪಾಲು ವಿಭಾಗವಾಗಿಲ್ಲ ಎಂದರೆ ಸಾಕ್ಷಿ

ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ವಾದಿಯರು ಹಾಜರುಪಡಿಸಿದ ನಿಪಿ-9 ಪ್ರಮಾಣ ಪತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ. ಡೈರಿ ಸಂಖ್ಯೆ 986 ನ್ನು ನ್ಯಾಯಾಲಯದಿಂದ ಆದ ಡಿಕ್ರಿ ಆಧಾರದ ಮೇಲೆ ಬರೆದಿಲ್ಲ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ರಮೇಶ ನನ್ನ ತಮ್ಮ. ಸರ್ವೆ ನಂ.20/14 ರಲ್ಲಿ ಕಲ್ಲಪ್ಪ, ಶಂಕರ ಮತ್ತು ರಾಮಚಂದ್ರ ರವರಿಗೆ ಪಾಲು ಇದೆ ಎಂದರೆ ಸರಿ. ಸರ್ವೆ ನಂ.20/14 ಕ್ಕೆ ಸಂಬಂಧಿಸಿದಂತೆ ನಿಮ್ಮ ತಮ್ಮನ ಪರವಾಗಿ ದಾನ ಪತ್ರ ಬರೆದುಕೊಡಲು ನಿಮ್ಮ ತಂದೆಗೆ ಅಧಿಕಾರ ಇರಲಿಲ್ಲ ಎಂದರೆ ಸರಿ. ಸರ್ವೆ ನಂ.20/16, ಸರ್ವೆ ನಂ.13/13, ಸರ್ವೆ ನಂ.20/22 ಗಳು ನಿಮ್ಮ ಅಜ್ಜನಿಂದ ಬಂದ ಸ್ವತ್ತುಗಳು ಎಂದರೆ ಸರಿ. ಈ ಎಲ್ಲಾ ಸ್ವತ್ತುಗಳಲ್ಲಿ ಕಲ್ಲಪ್ಪ, ಶಂಕರ ಮತ್ತು ರಾಮಚಂದ್ರ ರವರಿಗೆ ಪಾಲು ಇದೆ ಎಂದರೆ ಸರಿ. ಕಲತಗಡ ಮನೆ ನಂ.293 ಸಹ ನಮ್ಮ ಅಜ್ಜನಿಂದ ಬಂದ ಸ್ವತ್ತು ಎಂದರೆ ಸರಿ. ಅದರಲ್ಲಿಯೂ ಸಹ ಎಲ್ಲಾರಿಗೂ ಪಾಲು ಇದೆ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ನಮಗೆ 1/4, ಕಲ್ಲಪ್ಪ, ರಾಮಚಂದ್ರ ಮತ್ತು ಶಂಕರ್ ರವರಿಗೆ ತಲಾ 1/4 ಭಾಗ ಕೊಡಲು ನಮಗೆ ಯಾವುದೇ ತೊಂದರೆ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**